**ಕರ್ನಾಟಕ ಸರ್ಕಾರ**

ನಂ:ಪೌನಿ/ಎಂಆರ್‌ಸಿ/ಸಿಆರ್-101/2007-08

ಪೌರ ಸುಧಾರಣಾ ಕೋಶ,
ಪೌರಾಡಳಿತ ನಿರ್ದೇಶನಾಲಯ. MNSMC,
#1-4, 6ನೇ ಮಹಡಿ, ಐಟಿ ಪಾರ್ಕ್
ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್,
ಬೆಂಗಳೂರು-560 044. ದಿನಾಂಕ:13-08-2008

MRC driving municipal reforms

**ಸುತ್ತೋಲೆ**

ವಿಷಯ: ಗಣಕೀಕೃತಗೊಳಿಸಲಾದ ಜನನ ಮತ್ತು ಮರಣ ದಾಖಲೆಗಳ ಡೇಟಾಬೇಸ್‌ನಲ್ಲಿ ತಿದ್ದುಪಡಿ ಮಾಡುವ ಕುರಿತು

ಉಲ್ಲೇಖ: ಈ ಕಛೇರಿಯ ಸುತ್ತೋಲೆಯ ಸಮ ಸಂಖ್ಯೆ ದಿನಾಂಕ:26-6-08

....................

ಜನನ ಮತ್ತು ಮರಣ ನೊಂದಣಿಯಲ್ಲಿ ಗಣಕೀಕೃತಗೊಳಿಸುವ ಕಾರ್ಯವನ್ನು ಪಾರಂಭಿಸಿ ಗಣಕೀಕರಿಸಿದ ಪ್ರಮಾಣ ಪತ್ರವನ್ನು ನೀಡುತ್ತಿದ್ದು ಪ್ರಮಾಣ ಪತ್ರ ಪಡೆದಂತಹ ನಾಗರೀಕರು ಅವುಗಳಲ್ಲಿ ಕಂಡುಬಂದ ಲೋಪದೋಷಗಳನ್ನು ಸರಿಪಡಿಸಿಕೊಳ್ಳಲು ಕೋರಿದ ಮೇಲೆ ರಾಜ್ಯದ ಅನೇಕ ನಗರ ಸ್ಥಳೀಯ ಸಂಸ್ಥೆಗಳಿಂದ ಆನ್‌ಲೈನ್‌ನಲ್ಲಿ ಸರಿಪಡಿಸಿಕೊಳ್ಳಲು ಅಸಮರ್ಪಕ ಮತ್ತು ಅಪರಿಪೂರ್ಣ ಪ್ರಸ್ತಾವನೆಗಳು ಸ್ವೀಕೃತಿಯಾಗುತ್ತಿದ್ದ ಹಿನ್ನಲೆಯಲ್ಲಿ ಉಲ್ಲೇಖದಲ್ಲಿ ನಮೂದಿಸಲಾದ ಸುತ್ತೋಲೆ ಮೂಲಕ ಪ್ರಸ್ತಾವನೆ ಸಲ್ಲಿಸುವಾಗ ಅನುಸರಿಸಬೇಕಾದ ಕ್ರಮ ಕುರಿತು ಮಾರ್ಗದರ್ಶನ ನೀಡಲಾಗಿತ್ತು.

1969ನೇ ಜನನ ಮತ್ತು ಮರಣ ನೊಂದಣಿ ಅಧಿನಿಯಮದ ಕಲಂ 15ರ ಪ್ರಕಾರ (1999ನೇ ಜನನ ಮತ್ತು ಮರಣ ನೊಂದಣಿ ನಿಯಮಾವಳಿಯ ನಿಯಮ 11ರೊಂದಿಗೆ ಓದಿಕೊಳ್ಳುವುದು) ಯಾವುದೇ ಜನನ ಅಥವಾ ಮರಣ ದಾಖಲೆಗಳನ್ನು ಮ್ಯಾನ್ಯುಯಲ್ ರೆಕಾರ್ಡ್‌ಗಳಲ್ಲಿ ತಿದ್ದುಪಡಿ ಮಾಡುವ ಅಥವಾ ರದ್ದುಪಡಿಸುವ ಸಂಪೂರ್ಣ ಅಧಿಕಾರವು ಸಂಬಂಧಪಟ್ಟ ನೊಂದಾಣಾಧಿಕಾರಿಗಳಿಗೆ ಇರುತ್ತದೆ. ಮೇಲೆ ತಿಳಿಸಲಾದ ಅಧಿನಿಯಮ ಮತ್ತು ನಿಯಮಾವಳಿಯ ಉದ್ಧೃತ ಭಾಗವನ್ನು ಕೆಳಗೆ ತಿಳಿಸಲಾಗಿದೆ.

1) ***1969ನೇ ಜನನ ಮರಣಗಳ ನೊಂದಣಿ ಅಧಿನಿಯಮದ ಕಲಂ 15ರ ಉದ್ಧೃತ ಭಾಗ:***
***ಜನನ ಮರಣಗಳ ರಿಜಿಸ್ಟರಿನಲ್ಲಿ ದಾಖಲೆಯ ತಿದ್ದುಪಡಿ ಅಥವಾ ರದ್ದಿಯಾತಿ*** *:- ಈ ಅಧಿನಿಯಮದ ಮೇರೆಗೆ ತಾನು ಇಟ್ಟಿರುವ ಯಾವುದೇ ರಿಜಿಸ್ಟರಿನಲ್ಲಿ ಒಂದು ಜನನದ ಇಲ್ಲವೇ ಮರಣದ ಯಾವುದೇ ನಮೂದು ರೂಪದಲ್ಲಾಗಲಿ ವಿಷಯದಲ್ಲಾಗಲಿ ತಪ್ಪಾಗಿದೆಯೆಂದು ಅಥವಾ ವಂಚನೆಯಿಂದ ಅಥವಾ ಅನುಚಿತವಾಗಿ ಮಾಡಲ್ಪಟ್ಟಿದೆಯೆಂದು ರಿಜಿಸ್ಟ್ರಾರರಿಗೆ ಸಮಾಧಾನವಾಗುವಂತೆ ರುಜುವಾತಾದ ಪಕ್ಷದಲ್ಲಿ ಅಂಥ ನಮೂದುಗಳನ್ನು ಯಾವ ಷರತ್ತುಗಳ ಮೇಲೆ ಮತ್ತು ಯಾವ ಸನ್ನಿವೇಶಗಳಲ್ಲಿ ತಿದ್ದಬಹುದೆಂಬ ಅಥವಾ ರದ್ದುಪಡಿಸಬಹುದೆಂಬ ವಿಚಾರದಲ್ಲಿ ರಾಜ್ಯ ಸರ್ಕಾರದವರು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು* ***ಮೂಲ ನಮೂದನ್ನು ಯಾವ ರೀತಿಯಲ್ಲೂ ಬದಲಾವಣೆ ಮಾಡದೆ, ಅಂಚಿನಲ್ಲಿ ಸೂಕ್ತ ಷರಾ ಬರೆದು ಆ ತಪ್ಪನ್ನು ತಿದ್ದಬಹುದು ಅಥವಾ ನಮೂದನ್ನು ರದ್ದುಪಡಿಸಬಹುದು ಮತ್ತು ಅಂಚಿನಲ್ಲಿ ಬರೆದ ಷರಾಕ್ಕೆ ರುಜು ಹಾಕಿ ಆ ತಿದ್ದುಪಡಿಯ ಇಲ್ಲವೇ ರದ್ದಿಯಾತಿಯ ದಿನಾಂಕವನ್ನು ಬರೆಯತಕ್ಕದ್ದು.***

2) ***1999ನೇ ಕರ್ನಾಟಕ ಜನನ ಮರಣಗಳ ನಿಯಮಗಳ ನಿಯಮ 11(1)ಮತ್ತು (4)ರ ಉದ್ಧೃತ ಭಾಗ:***

**ಜನನ ಮತ್ತು ಮರಣಗಳ ವಹಿಯಲ್ಲಿ ನಮೂದಿನ ತಿದ್ದುಪಡಿ ಅಥವಾ ರದ್ದುಗೊಳಿಸುವುದು:-**

*11(1) ವಹಿಯಲ್ಲಿ ಬರವಣಿಗೆಯ ಅಥವಾ ಔಪಚಾರಿಕ ತಪ್ಪನ್ನು ಮಾಡಲಾಗಿದೆ ಎಂದು ನೋಂದಣಿದಾರರಿಗೆ ವರದಿ ಮಾಡಲ್ಪಟ್ಟರೆ ಅಥವಾ ಅಂತಹ ತಪ್ಪನ್ನು ತಾವು ಬೇರೆ ರೀತಿಯಲ್ಲಿ ಗಮನಿಸಿದ್ದರೆ ಮತ್ತು ವಹಿಯು ಅವರ ಸ್ವಾಧೀನದಲ್ಲಿದ್ದರೆ, ನೋಂದಣಿದಾರರು ವಿಷಯದ ಬಗ್ಗೆ ವಿಚಾರಿಸತಕ್ಕದ್ದು ಮತ್ತು ಅಂತಹ ಯಾವುದೇ ತಪ್ಪು ಮಾಡಲ್ಪಟ್ಟಿದೆಯೆಂದು ಮನವರಿಕೆಯಾದರೆ, 15ನೇಯ ಪ್ರಕರಣದಲ್ಲಿ ಉಪಬಂಧಿಸಿರುವ ರೀತ್ಯಾ (ನಮೂದನ್ನು ತಿದ್ದುವುದರ ಅಥವಾ ರದ್ದುಗೊಳಿಸುವುದರ ಮೂಲಕ) ತಪ್ಪನ್ನು ತಿದ್ದತಕ್ಕದ್ದು ಮತ್ತು ಆ ತಪ್ಪನ್ನು ಹೇಗೆ ತಿದ್ದಲಾಗಿದೆ ಎಂಬುದನ್ನು ತೋರಿಸುವ ನಮೂದಿನ ಉದ್ಧೃತ ಭಾಗವನ್ನು ರಾಜ್ಯ ಸರ್ಕಾರಕ್ಕೆ ಅಥವಾ ಆಯಾ ಸಂದರ್ಭಾನುಸಾರ ತಹಸೀಲ್ದಾರರಿಗೆ ಅಥವಾ ಮುನಿಸಿಪಾಲಿಟಿಯ ಕಮೀಷನರಿಗೆ/ಮುಖ್ಯಾಧಿಕಾರಿಗೆ ಕಳುಹಿಸತಕ್ಕದ್ದು.*

*11(4) ಜನನ ಮತ್ತು ಮರಣಗಳ ವಹಿಯಲ್ಲಿಯ ಯಾವುದೇ ನಮೂದು ದೋಷಯುಕ್ತವಾಗಿದೆಯೆಂದು ಯಾವುದೇ ವ್ಯಕ್ತಿಯು ನಿಖರವಾಗಿ ಹೇಳಿದರೆ, ಅಂತಹ ವ್ಯಕ್ತಿಯು ತಪ್ಪಿನ ಸ್ವರೂಪವನ್ನು ಮತ್ತು ಆ ವ್ಯವಹಾರಕ್ಕೆ ಸಂಬಂಧಿಸಿದ ನಿಜವಾದ ಅಂಶಗಳ ಬಗ್ಗೆ ತಿಳುವಳಿಕೆ ಹೊಂದಿರುವ ಇಬ್ಬರು ವಿಶ್ವಾಸಾರ್ಹ ವ್ಯಕ್ತಿಗಳ ಘೋಷಣೆಯನ್ನು ಒಪ್ಪಿಸಿದಾಗ, ನೋಂದಣಿದಾರರು 15ನೆಯ ಪ್ರಕರಣದ ಮೇರೆಗೆ ನಿಗದಿಪಡಿಸಿದ ರೀತಿಯಲ್ಲಿ ನಮೂದನ್ನು ತಿದ್ದಬಹುದು.*

ಮೇಲೆ ತಿಳಿಸಲಾದ ಅಧಿಕಾರದ ಮೇರೆ ಮ್ಯಾನ್ಯುಯಲ್ ರೆಕಾರ್ಡ್ಸ್ ನಲ್ಲಿ ಸೂಕ್ತ ತಿದ್ದುಪಡಿ ಮಾಡಲು ಅಗತ್ಯ ದಾಖಲಾತಿಗಳನ್ನು ಸಂಬಂಧಪಟ್ಟವರಿಂದ ಪಡೆದು ಒದಗಿಸಲಾದ ದಾಖಲೆಗಳು ಸಮಾಧಾನವಾಗುವಂತೆ ರುಜುವಾತಾದ ಪಕ್ಷದಲ್ಲಿ ಸೂಕ್ತ ಕಛೇರಿ ಆದೇಶ ಹೊರಡಿಸಿ ಅಂತಹ ಮೂಲ ನಮೂದನ್ನು ಯಾವ ರೀತಿಯಲ್ಲೂ ಬದಲಾವಣೆ ಮಾಡದೆ **ಅಂತಹ ತಪ್ಪನ್ನು ಅಥವಾ ತಿದ್ದುಪಡಿಯನ್ನು ಯಾವ ಆಧಾರದ ಮೇಲೆ ಮಾಡಲಾಗಿದೆ ಎಂಬ ಬಗ್ಗೆ ಅಂಚಿನಲ್ಲಿ ಷರಾ ಬರೆದು ರುಜು ಹಾಕಿ ದಿನಾಂಕವನ್ನು ನಮೂದಿಸುವುದು.**

ತರುವಾಯ ಈ ರೀತಿ ಮಾಡಿರುವ ತಿದ್ದುಪಡಿಗಳನ್ನು ಗಣಕೀಕೃತಗೊಳಿಸಲಾದ ಜನನ ಮತ್ತು ಮರಣ ದಾಖಲೆಗಳ ಡೇಟಾಬೇಸ್‌ನಲ್ಲಿ ಸರಿಪಡಿಸಲು, ಲಗತ್ತಿಸಿರುವ ನಮೂನೆಯಲ್ಲಿ ಮಾತ್ರ ಕೋರಿಕೆಯನ್ನು (ಮತ್ತ್ಯಾವುದೇ ದಾಖಲೆಗಳನ್ನು ಲಗತ್ತಿಸದೆ) ಜಂಟಿ ನಿರ್ದೇಶಕರು, ಪೌರ ಸುಧಾರಣಾ ಕೋಶ, MNSMC, #1-4, 6ನೇ ಮಹಡಿ, ಐಟಿ ಪಾರ್ಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-560 044. ಇಲ್ಲಿಗೆ ಕಳುಹಿಸುವಂತೆ ಈ ಮೂಲಕ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು, ಪೌರಾಯುಕ್ತರು ಮತ್ತು ಮುಖ್ಯಾಧಿಕಾರಿಗಳಿಗೆ ತಿಳಿಸಲಾಗಿದೆ.

ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿ ಕಳುಹಿಸಲು ತಿಳಿಸಲಾಗಿದೆ.

ನಿರ್ದೇಶಕರು
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:-

1) ಜಂಟಿ ನಿರ್ದೇಶಕರು(ಸು), ಪೌರ ಸುಧಾರಣಾ ಕೋಶ, ಬೆಂಗಳೂರು.
2) ಕೆ.ಎಂ.ಆರ್.ಪಿ. ಮತ್ತು ನಿರ್ಮಲ ನಗರ ಪಟ್ಟಣಗಳಿಗೆ ಸಂಬಂಧಪಟ್ಟ ಜಿಲ್ಲೆಗಳ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ.
3) ಕೆ.ಎಂ.ಆರ್.ಪಿ ಮತ್ತು ನಿರ್ಮಲ ನಗರ ಪಟ್ಟಣಗಳಿಗೆ ಸಂಬಂಧಪಟ್ಟ, ನಗರಪಾಲಿಕೆಗಳ ಆಯುಕ್ತರು/ನಗರಸಭೆಗಳ ಪೌರಾಯುಕ್ತರು/ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳ ಮುಖ್ಯಾಧಿಕಾರಿಗಳು.
4) ನೋಡೆಲ್ ಆಫೀಸರ್, ಪೌರ ಸುಧಾರಣಾ ಕೋಶ, ಬೆಂಗಳೂರು.
5) ಮಾಹಿತಿ ತಂತ್ರಜ್ಞಾನ ಕನ್ಸಲ್‌ಟೆಂಟ್ಸ್, ಪೌರ ಸುಧಾರಣಾ ಕೋಶ, ಬೆಂಗಳೂರು.
6) ವ್ಯವಸ್ಥಾಪಕರುಗಳು, ಪೌರ ಸುಧಾರಣಾ ಕೋಶ, ಬೆಂಗಳೂರು.
7) ಕಛೇರಿ ಕಡತ.

# ಮಾದರಿ ಪತ್ರ

ಇವರಿಗೆ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ವಿಶ್ವೇಶ್ವರಯ್ಯ ಕೇಂದ್ರ,
ಬೆಂಗಳೂರು-1.

ಮಾನ್ಯರೇ,

ವಿಷಯ: ಜನನ ಮರಣ ದಾಖಲೆಗಳನ್ನು ಡೇಟಾಬೇಸ್‌ನಲ್ಲಿ ಸರಿಪಡಿಸುವ ಕುರಿತು.

....................

ಜನನ/ಮರಣ ದಾಖಲೆಗಳಲ್ಲಿ ಬದಲಾವಣೆ ಮಾಡಲು _________________ರವರಿಂದ ಕೋರಿಕೆಯನ್ನು ಸ್ವೀಕರಿಸಿದ್ದು ಸದರಿ ಕೋರಿಕೆಗಳು ಈ ಕೆಳಗಿನಂತಿವೆ.

| ಕ್ರಮ ಸಂಖ್ಯೆ | ಹಾಲಿ ಇರುವ ಜನನ/ಮರಣ ದಾಖಲೆಗಳ ವಿವರ | ತಿದ್ದುಪಡಿ ಮಾಡಬೇಕಿರುವ ವಿವರ | ಷರಾ |
|---|---|---|---|
| 1 | | | |
| 2 | | | |
| 3 | | | |

1969ನೇ ಜನನ ಮತ್ತು ಮರಣಗಳ ನೊಂದಣಿ ಅಧಿನಿಯಮದ ಕಲಂ 15 ಮತ್ತು 1999ನೇ ಜನನ ಮತ್ತು ಮರಣಗಳ ನಿಯಮಾವಳಿಗಳ ನಿಯಮ 11(1) ಮತ್ತು (4) ರೀತ್ಯಾ ಜನನ ಮತ್ತು ಮರಣಗಳ ನೊಂದಣಾಧಿಕಾರಿಯಾದ ನಾನು ಪ್ರಕರಣವನ್ನು ವಿಚಾರಣೆ ನಡೆಸಿರುತ್ತೇನೆ. ಕೋರಿಕೆಯು ನಿಯಮಾನುಸಾರವಾಗಿದ್ದು ಸತ್ಯಾಂಶದಿಂದ ಕೂಡಿರುವುದಾಗಿ ನನಗೆ ಮನವರಿಕೆಯಾಗಿರುತ್ತದೆ. ಆದ್ದರಿಂದ ಮೇಲೆ ಉಲ್ಲೇಖಿಸಿರುವ ನಿಯಮಗಳನ್ವಯ ಎಲ್ಲಾ ಬದಲಾವಣೆಗಳನ್ನು ಕೈಬರಹದ ರಿಜಿಸ್ಟರ್‌ನಲ್ಲಿ ಮಾಡಲಾಗಿದೆ. ಈ ಆಧಾರದ ಮೇಲೆ ಗಣಕೀಕೃತಗೊಂಡ ಜನನ ಮರಣ ದಾಖಲೆಗಳ ಡೇಟಾಬೇಸ್‌ನಲ್ಲಿ ಈ ಕೆಳಗಿನಂತೆ ತಮ್ಮ ಹಂತದಲ್ಲಿ ಸರಿಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ಕೋರಲಾಗಿದೆ.

| ಕ್ರಮ ಸಂಖ್ಯೆ | ಜನನ/ಮರಣ ದಾಖಲೆಗಳ ನೊಂದಣಿ ಸಂಖ್ಯೆ | ಹಾಲಿ ಇರುವ ಜನನ/ಮರಣ ದಾಖಲೆಗಳ ವಿವರ | ಡೇಟಾಬೇಸ್‌ನಲ್ಲಿ ಸರಿಪಡಿಸಬೇಕಾದ ವಿವರ |
|---|---|---|---|
| 1 | | | |
| 2 | | | |
| 3 | | | |

ಸಹಿ/-
ಜನನ ಮತ್ತು ಮರಣಗಳ ನೊಂದಣಾಧಿಕಾರಿ
(ಮೊಹರಿನೊಂದಿಗೆ)